## ಅಸಲು ದಾವಾ ಸಂಖ್ಯೆ-**101/2021** ಪಿ.ಡಬ್ಲ್ಯೂ:- **1**

ದಿನಾಂಕಃ **15-04-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

### ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-

ನಾನು ಸುರಹೊನ್ನೆಯಲ್ಲಿ ವಿದ್ಯಾಭ್ಯಾಸ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ದಾವಾ ಆಸ್ತಿಯು ನನ್ನ ತಂದೆಯ ತಂದೆಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ನಮ್ಮ ಅಜ್ಜನಿಗೆ ದಾವಾ ಆಸ್ತಿಯು ಯಾವ ದಿನಾಂಕದಂದು ಮಂಜೂರಾಗಿದೆ ಎಂದು ನಿರ್ದಿಷ್ಟವಾಗಿ ನನಗೆ ಗೊತ್ತಿಲ್ಲ. ಲತಾ ವೀರೇಶ್ ಯಾರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಈಗ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಆದರೆ ಸದರಿ ದಾಖಲೆಗಳು ಯಾವ ವರ್ಷಕ್ಕೆ ಸಂಬಂಧಪಟ್ಟಿದ್ದು ಎಂದು ನನಗೆ ನೆನಪಿಲ್ಲ. ನನಗೆ 8 ವರ್ಷ ವಯಸ್ಸಿದ್ದಾಗ ನನ್ನ ತಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ನನ್ನ ತಾಯಿ ಲಕ್ಷ್ಮಮ್ಮ ಸುರಹೊನ್ನೆ ಗ್ರಾಮದಲ್ಲಿ ವಾಸವಾಗಿದ್ದರು. ಮರಣ ಶಾಸನದ ಬಗ್ಗೆ ದೊಡ್ಡೆತ್ತಿನಹಳ್ಳಿ ಗ್ರಾಮದವರು ತಿಳಿಸಿರುತ್ತಾರೆ. ಆದರೆ ಅವರ ಹೆಸರು ನನಗೆ ನೆನಪಿಲ್ಲ. ನಿಪಿ-2 ಮರಣ ಶಾಸನವನ್ನು ಹೊನ್ನಾಳಿಯಲ್ಲಿ ವಾಸವಾಗಿರುವ ಮಂಜಣ್ಣರವರು ತಂದು ಕೊಟ್ಟಿರುತ್ತಾರೆ. ಅವರ ತಂದೆ ತಾಯಿ ಹೆಸರು ನನಗೆ ಗೊತ್ತಿಲ್ಲ. ನಿಪಿ-2 ಮರಣ ಶಾಸನದಲ್ಲಿ ಏನು ಬರೆದಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ.ಸಾಕ್ಷಿಯು ಮುಂದುವರೆದು ನನಗೆ ಓದು ಬರಹ ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ಮರಣ ಶಾಸನದಲ್ಲಿ ಏನು ಬರೆದಿದೆ ಎಂಬುವುದನ್ನು ನಾನು ಇನ್ನೊಬ್ಬರಿಂದ ತಿಳಿದುಕೊಂಡಿರುವುದಿಲ್ಲ. ನಿಪಿ-2 ಮರಣ ಶಾಸನದಲ್ಲಿ ಲಕ್ಷ್ಮಮ್ಮರವರು ತನಗೆ ಏಕೈಕ ಸುನಿತಾ ಎಂಬ ಒಬ್ಬಳೇ ಮಗಳು ಇದ್ದಾಳೆ ಎಂದು ನಮೂದು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಲಕ್ಷ್ಮಮ್ಮರವರಿಗೆ ನಾನು ದೊಡ್ಡ ಮಗಳು ಮತ್ತು ಸುನಿತಾ ಕಿರಿಯ ಮಗಳು ಎಂದು

ನುಡಿಯುತ್ತಾರೆ. ನಿಪಿ-2 ಮರಣ ಶಾಸನದಲ್ಲಿ ಲಕ್ಷ್ಮಮ್ಮರವರು ತಮಗೆ ಸುನಿತಾ ಮಗಳನ್ನು ಹೊರತುಪಡಿಸಿ ಬೇರೆ ಮಕ್ಕಳು ಇಲ್ಲ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಲಕ್ಷ್ಮಮ್ಮರವರಿಗೆ ಮಗಳು ಆಗದಿದ್ದ ಕಾರಣ ನನ್ನ ಬಗ್ಗೆ ಮರಣ ಶಾಸನದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮರಣ ಶಾಸನದ ಆಧಾರದ ಮೇಲೆ ದಾವಾ ಆಸ್ತಿಯ ಪಹಣಿ ಮತ್ತು ಖಾತೆ ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯಲ್ಲಿ ನನಗೂ ಭಾಗಾಂಶದ ಹಕ್ಕು ಇದೆ ಎಂದು ನುಡಿಯುತ್ತಾರೆ. ನನ್ನನ್ನು ನನ್ನ ಅತ್ತೆ ಸಾವಿತ್ರಮ್ಮರವರು ದತ್ತು ತೆಗೆದುಕೊಂಡಿದ್ದರಿಂದ ಲಕ್ಷ್ಮಮ್ಮರವರಿಗೆ ಸುನಿತಾ ಒಬ್ಬರೇ ಮಾತ್ರ ಮಗಳು ಎಂದು ಮರಣ ಶಾಸನದಲ್ಲಿ ಬರೆಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನನ್ನು ಸಾವಿತ್ರಮ್ಮರವರು ದತ್ತು ಪಡೆದುಕೊಂಡು ನನ್ನ ಲಾಲನೆ ಮತ್ತು ಪಾಲನೆಯನ್ನು ಮಾಡಿ ನನ್ನ ಮದುವೆಯನ್ನು ಸಹ ಅವರೇ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.